Sri T. SIDDALINGAIYA.—There may be.

Sm. RATNAMMA ISAAC.—Are the Government aware that there are about six of them?

Sri T. SIDDALINGAIYA.—I do not know the number.

Sm. RATNAMMA ISAAC.—In connection with such appointments of Superintendents of Ayurvedic and Unani Hospitals, will not the Government feel that persons with a combined knowledge of allopathy, ayurvedic and unani systems of medicine will be better suited to be in charge of hospitals like this?

Sri T. SIDDALINGAIYA.—The suggestion is coming from all places. Even in the Government of India it is under consideration. It is not settled yet.

ಶ್ರೀ ಕೆ. ಆರ್. ಮಾಧವರಾಯರು (ಶಿವಮೊಗ್ಗ ಜಿಲ್ಲೆ).—ಅವರಿಗೆ 'ಪ್ರಾಣಾಚಾರ್ಯ ಭಿಷಗ್ರತ್ನ' ಎಂಬ ಡಿಗ್ರಿ ಇರುವುದು ತಮಗೆ ಗೊತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು. – ಗೊತ್ತಿದೆ.

ಶ್ರೀ ಕೆ. ಆರ್. ಮಾಧವರಾಯರು.—ಅವರು ಈಗ 4–5 ವರ್ಷದಿಂದ ಅಖಿಲ ಭಾರತ ಆಯುರ್ವೇದ ವೈದ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

Sri L. SIDDAPPA (Shimoga District—General).—Is it eliciting information Sir?

Sri H.M. CHANNABASAPPA (Mysore District—General).—It is enlightening members!

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಅವರನ್ನು ನೇಮಕ ಮಾಡಿ ಎಷ್ಟು ದಿನ ಆಯಿತು?

Sri T. SIDDALINGAIYA.—It is contained in the answer.

ಶ್ರೀ ಬಿ. ಚನ್ನಬೈರೇಗೌಡರು.—ಅವರು ಹಾಸನದಲ್ಲಿ ರಾಜಕೀಯದಲ್ಲಿದ್ದಾಗ ಜೈಲಿಗೆ ಹೋಗಿದ್ದರೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೋಗಿರಬಹುದು.

ಶ್ರೀ ಬಿ. ಚನ್ನಬೈರೇಗೌಡರು.—ನಿರ್ದಿಷ್ಟವಾಗಿ ಉತ್ತರ ಹೇಳಬೇಕು ಸ್ವಾಮಿ.

Mr. SPEAKER.—The Hon'ble Member must take the answer furnished by the Hon'ble Minister.

ಶ್ರೀ ಬಿ. ಚನ್ನಬೈರೇಗೌಡರು.—ಜೈಲಿಗೆ ಹೋದವರಿಗೆ ಕೆಲಸ ಕೊಡಬಹುದೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಜೈಲಿಗೆ ಹೋಗಿದ್ದೇ ಇರುವವರೂ ಈಗ ಆ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

Sri H. M. CHANNABASAPPA.—Are the people who have gone to jail on political grounds prohibited from holding appointments in Government service?

Sri T. SIDDALINGAIYA.—Absolutely not.

Medium of Instruction in Educational Institutions in the State.

*Q.—73. **Sri D. H. CHANDRASEKHARAIYA** (Chitaldrug District—General).—

Will the Government be pleased to state:—

(*a*) the languages that are taught and the media of instruction employed in different grades of Education from the Primary School to the University;

(*b*) the steps that have been taken by them to revise and restate their language policy, keeping in view the claims of the mother-tongues, the regional language, the national language, the English language and classical languages for study as Languages and as media of instruction in the State Schools and Colleges?

A.—**Sri T. SIDDALINGAIYA** (Minister for Education and Public Health).—

(*a*) *Primary Stage.*—In primary schools only mother-tongue of the pupil is taught and the medium of instruction is only the mother-tongue of the pupil. There are Kannada, Urdu, Tamil, Telugu and Hindi Primary Schools.

Middle School Stage.—The languages taught in Middle Schools are:—

(i) First language	...	English.
(ii) Second Do	...	Kannada, Urdu, Tamil or Telugu.
(iii) Optional group	...	Hindi, Sanskrit, Persian and Tamil may be offered as optional subjects.

The medium of instruction is in Kannada in all the general schools. In the Special Schools it is mother-tongue of the pupils.

High School Stage.—In this stage of education, Indian languages as well as classical languages are offered as second languages. The medium of instruction is either in English or Kannada.

Recently Hindi has been made compulsory non-examination subject.

University Stage.—The following languages are taught in the University:—English, Kannada, Sanskrit, Urdu, Persian, Arabic, Hindi, French, Latin, Malayalam, Tamil and Telugu.

Medium of instruction in the University is English.

(b) The question of language policy in schools is under the active consideration of Government.

The report of the University Commission has dealt with this problem in detail and has made certain recommendations. They will be considered in the Inter-University Board and the Central Advisory Board, Government of India. As this is an All-India problem, the decision of the general policy by the Inter-University Board and also by the Government of India will have to be awaited and then final detailed decisions arrived at.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಡಿಯಂ ಮಾಡಬೇಕೆಂದು ಅನೇಕ ವೇಳೆ ಸರ್ಕಾರದವರಿಗೆ ನಿರ್ಣಯಗಳ ಮೂಲಕ ಮತ್ತು ಇತರ ವಿಧದಲ್ಲಿ ಒತ್ತಾಯ ಬಂದಿರುವುದು ನಿಜ ಅಲ್ಲವೆ?

*ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಟಿ. ಮಾದಯ್ಯಗೌಡರು.—ವಿಶ್ವವಿದ್ಯಾನಿಲಯದವರು ಇಂಟರ್ ಯೂನಿವರ್ಸಿಟಿ ಬೋರ್ಡ್‌ನವರ ಅನುಮತಿಯಿಲ್ಲದೆ ಕಾಲೇಜುಗಳಲ್ಲಿ ಕನ್ನಡ ಮಾಡಿಯಂ ಮಾಡಕೂಡದೆಂಬ ನಿರ್ಬಂಧವಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕಾಲೇಜುಗಳಲ್ಲಿ ಕನ್ನಡ ಮಾಡಿಯಂ ಇನ್ನೂ ಮಾಡಿಯೇ ಇಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಸೆಂಟ್ರಲ್ ಅಡ್ವೈಸರಿ ಬೋರ್ಡ್‌ನವರು ಆಲೋಚನೆ ಮಾಡುತ್ತಾರೆಂದು ಹೇಳಿದರೆ ತಾವು ಈ ರೀತಿ ಕನ್ನಡ ಮಾಡಿಯಂ ಮಾಡಕೂಡದೆಂಬ ನಿರ್ಬಂಧವೇನಾದರೂ ಇದೆಯೇ? ನೀವು ಮಾಡಿದರೆ ಅವರು ಒಪ್ಪಿಕೊಳ್ಳುತ್ತಾರೆಯೇ?

Sri T. SIDDALINGAIYA.—It is a hythothetical question.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಉದಾಹರಣೆಗೆ ಹೈದರಾಬಾದು ಮುಂತಾದ ಕಡೆಗಳಲ್ಲಿ ಸ್ಥಳೀಯ ಭಾಷೆಯನ್ನು ಅಥವಾ ಮಾಡಿಯಂ ಆಗಿ ಇಟ್ಟುಕೊಂಡಿರುವುದು ನಮ್ಮ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿದೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆಯೇ ನಮ್ಮ ಸರ್ಕಾರದವರೂ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಡಿಯಂ ಮಾಡುವುದಕ್ಕೆ ಉಂಟಾಗಿರತಕ್ಕ ತೊಂದರೆಗಳಾದರೂ ಏನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವಿಶ್ವವಿದ್ಯಾನಿಲಯ ಮತ್ತು ಇತರ ಎಲ್ಲಾ ವಿದ್ಯಾಭ್ಯಾಸದ ಪದ್ಧತಿಯಲ್ಲೂ ಯಾವ ಮೀಡಿಯಂ ಇಡಬೇಕೆಂಬ ವಿಚಾರ ಸಮಗ್ರ ಭಾರತದ ವಿಚಾರ. ಅದು ಪರಿಶೀಲನೆಯಲ್ಲಿದೆ. ಅದಕ್ಕೋಸ್ಕರವೇ ಈಗ ಯಾವುದನ್ನೂ ತೀರ್ಮಾನ ಮಾಡುವ ಹಾಗಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಪರಿಶೀಲನೆಯಲ್ಲಿದ್ದರೂ ಒಂದು ವೇಳೆ ನೀವೇನಾದರೂ ಮಾಡಿದರೆ ಅದಕ್ಕೆ ನಿರ್ಬಂಧ ಮಾಡುತ್ತಾರೆಯೇ? ಒಂದ ವೇಳೆ ಅವರು ಮಾಡುವುದು ನಿಧಾನವಾದ ಪಕ್ಷದಲ್ಲಿ ನಾವು ಅವಶ್ಯಕವಾಗಿ ಮಾಡಬೇಕೆಂದು ನಮ್ಮ ದೇಶದ ಜನಗಳು ಅಭಿಪ್ರಾಯಪಡುವುದಾದರೆ ಅದನ್ನು ಏಕೆ ನಿಲ್ಲಿಸಬೇಕು?

Sri T. SIDDALINGAIYA.—The question of language medium is not yet settled. ರೀಜನರ್ ರ್ಯಾಂಗ್‌ವೇಜನ್ನು ಆಯಾಯ ವಿಶ್ವವಿದ್ಯಾನಿಲಯದವರು ಕಲಿಸಬೇಕೆಂದು ನಿರ್ಬಂಧವಿಲ್ಲ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಹೈಸ್ಕೂಲುಗಳಲ್ಲಿ ಈಗ ಎಷ್ಟು ವರ್ಷದಿಂದ ಕನ್ನಡ ಮಾಡಿಯಂ ಜಾರಿಗೆ ತಂದಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾಲ್ಕಾರು ಹತ್ತು ವರ್ಷಗಳಿಂದ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಇದರಿಂದ ಸಾಧಕಬಾಧಕಗಳೇನೆಂಬುದನ್ನು ನಿರ್ಧರಿಸಿ ತೀರ್ಮಾನ ತೆಗೆದುಕೊಳ್ಳತಕ್ಕದ್ದು ಯಾವ ಕಾಲದಲ್ಲಿ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ದೀರ್ಘವಾಗಿ ಆ ವಿಚಾರವನ್ನು ಆಲೋಚನೆ ಮಾಡಿದೆ. ಕನ್ನಡ ಮಾಡಿಯಂನಿಂದ ಒಳ್ಳೆಯ ಫಲತಾಂಶಗಳೇ ಕಂಡುಬಂದಿವೆ. ಆದರೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇನ್ನೂ ಸ್ವಲ್ಪ ಕಾಲ ಹಿಡಿಯುತ್ತದೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ಹೀಗೆ ಇನ್ನೂ ತೀರ್ಮಾನ ಮಾಡದಿರುವುದರಿಂದ ಎಷ್ಟೋ ಕಡೆ ಕನ್ನಡ ಮಾಡಿಯಂನ್ನು ಇಟ್ಟಿದ್ದರೂ ಹೆಚ್ಚು ಹೆಚ್ಚು ಜನರು ತೆಗೆದುಕೊಳ್ಳದೆ ದೇಶಭಾಷೆಯು ಅಭಿವೃದ್ಧಿಗೆ ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಇಂಗ್ಲಿಷ್ ಮಾಡಿಯಂ ಇನ್ನೂ ಇರುವುದರಿಂದ ಜನರಿಗೆ ಇಂಗ್ಲೀಷಿನ ಮೇಲೆ ವ್ಯಾಮೋಹ ಉಂಟಾಗಿ ದೇಶಭಾಷೆಗೆ ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.—ತಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ?

Sri T. SIDDALINGAIYA.—Certainly.

Sri Kadidal MANJAPPA (Shimoga District—General).—Has it come to the notice of the Government that students who had taken Kannada as medium in high schools have found it very difficult to understand technical terms in colleges?

Sri T. SIDDALINGAIYA.—ನಮ್ಮ ಗಮನಕ್ಕೆ ಬಂದಿಲ್ಲ. On the other hand they are finding it more easy.

Sri Kadidal MANJAPPA.—In whose opinion is it, Sir?

Sri T. SIDDALINGAIYA.—It is a matter of opinion.

ಮುಷೀರ್-ಉಲ್-ಮುಲ್ಕ್ ಜೆ. ಮಹಮ್ಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು—ಮುಸ್ಲಿಂ).—ವಯಸ್ಕರ ವಿದ್ಯಾಭ್ಯಾಸದ ಯೋಜನೆಯಲ್ಲಿ ಬೋಧನೆಮಾಡುವ ಭಾಷೆ ಯಾವುದು?

Mr. SPEAKER.—That does not arise.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಹೊಸದಾಗಿ ಪ್ರಾರಂಭವಾದ ಹೈಸ್ಕೂಲುಗಳಲ್ಲಿ ಒಂದೊಂದೇ ತರಗತಿಗಳಿದ್ದರೆ ಅಲ್ಲಿ ಇಂಗ್ಲೀಷ್ ಮಾಡಿಯಮ್ಮೇ ಇರಬೇಕೆಂದು ಒತ್ತಾಯವೇನಾದರೂ ಇದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಗೆ ಒತ್ತಾಯವೇನೂ ಇಲ್ಲ. ಬಂದೇ ತರಗತಿಯನ್ನು ಪ್ರಾರಂಭ ಮಾಡುವಾಗ ಆಯಾ ಊರಿನ ಅನುಕೂಲತೆಗೆ ತಕ್ಕಂತೆ ಪ್ರಾರಂಭ ಮಾಡುತ್ತಾರೆ. ಈ ವಿಷಯದಲ್ಲಿ ಇನ್ನೂ ಯಾವುದೂ ತೀರ್ಮಾನವಾಗಿಲ್ಲ.

ಶ್ರೀ ಎ. ಜಿ. ಬಂದೀಗೌಡರು.—ಹಾಗೇನೂ ಒತ್ತಾಯವಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಒತ್ತಾಯವೇನೂ ಇಲ್ಲ. ತಾವೇ ಇಷ್ಟಪಟ್ಟು ಹಾಗೆ ಏರ್ಪಾಡು ಮಾಡಿಕೊಳ್ಳುತ್ತಾರೆ.

ಶ್ರೀ ಎ. ಜಿ. ಬಂದೀಗೌಡರು.—ಒತ್ತಾಯವೇನೂ ಇಲ್ಲವೆಂದು ಹೇಳಿದ ಮೇಲೆ ಕನ್ನಡ ಮಾಡಿಯಮ್ಮನ್ನೇ ಮಾಡಿಕೊಳ್ಳುವುದರಿಂದ ತೊಂದರೆಯೇನಾದರೂ ಇದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಗೆಯೇ ಮಾಡಿಕೊಳ್ಳಬಹುದು. It is a process not yet settled down.

ಶ್ರೀ ಎ. ಜಿ. ಬಂದೀಗೌಡರು.—ಆದುದರಿಂದ ಸರ್ಕಾರದವರು ಹೀಗೆಯೇ ಮಾಡಬೇಕೆಂದು ಒತ್ತಾಯ ಮಾಡುತ್ತಾರೆಂಬುದೇನೂ ಇಲ್ಲ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ವಿಶ್ವವಿದ್ಯಾನಿಲಯದಲ್ಲಿ ಇಂಥಾದ್ದೇ ಮಾಡಿಯಂ ಇರಬೇಕೆಂದು ತೀರ್ಮಾನ ಮಾಡುವವರು ಯಾರು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವಿಶ್ವವಿದ್ಯಾನಿಲಯದವರು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಂಟರ್ ಯೂನಿವರ್ಸಿಟಿಯವರ ತೀರ್ಮಾನವೇನಾದರೂ ನಮ್ಮನ್ನು ಬಂಧಿಸುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದುವರೆಗೂ ಬರಾತ್ಕಾರವಾಗಿ ಯಾವುದೂ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಈಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಡಿಯಂತರುವುದರಲ್ಲಿ ತೊಂದರೆಯೇನಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತೊಂದರೆಯಿದೆಯೆಂದು ತಜ್ಞರು ಹೇಳುತ್ತಾರೆ. ಮದ್ರಾಸಿನವರು ವಿಶ್ವ ವಿದ್ಯಾನಿಲಯದಲ್ಲಿ ಇಂಗ್ಲೀಷೇ ಇರಬೇಕೆಂದು ತೀರ್ಮಾನ ಮಾಡಿದ್ದಾರೆ!

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಂಟರ್ ಯೂನಿವರ್ಸಿಟಿ ಬೋರ್ಡಿನವರು ಹಿಂದೀ ಭಾಷೆಯೇ ಯೂನಿವರ್ಸಿಟಿಯಲ್ಲಿ ಬೋಧಕ ಭಾಷೆಯಾಗಿರಬೇಕೆಂದು ಹೇಳಿದರೆ ಹಾಗೆಯೇ ಮಾಡಬೇಕೇ?

ಶ್ರೀ ಟಿ. ಸಿದ್ದಲಿಂಗಯ್ಯನವರು —ಹಾಗೆ ತೀರ್ಮಾನ ಮಾಡಿದರೆ, ಮಾಡಬೇಕು.

ಶ್ರೀ ಡಿ ಎಂ. ಸಿದ್ದಯ್ಯನವರು —ಹಾಗಾದರೆ ಪ್ರಾಂತಭಾಷೆಯೇನಾಗಬೇಕು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಪ್ರಾಂತ ಭಾಷೆ ಪ್ರಾಂತದ ಕೆಲಸ ಕಾರ್ಯಗಳಿಗೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಸರ್ಕಾರದ ಎಲ್ಲಾ ಕೆಲಸಗಳನ್ನೂ ಬಿಟ್ಟು ಮೇಲೆ ಇನ್ನೂ ಪ್ರಾಂತದ ಕೆಲಸಗಳೆಂದರೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಯಾ ಪ್ರಾಂತ್ಯಗಳೊಳಗೆ ಏನೇನಿರುತ್ತವೆಯೋ ಅವು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇಂಗ್ಲಿಷ್ ಭಾಷೆ ಇನ್ನು 15 ವರ್ಷಗಳಲ್ಲಿ ಹೋಗಿಬಿಡುತ್ತದೆಂಬುದು ಗೊತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ರಾಜ್ಯಾಂಗ ಶಾಸನದಲ್ಲೇ ತಿಳಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ವಿಶ್ವವಿದ್ಯಾನಿಲಯದಲ್ಲ. ನಮ್ಮ ದೇಶದ ಹಿತದೃಷ್ಟಿಯಿಂದ ಕನ್ನಡ ಭಾಷೆಯ ಉಪಯೋಗವನ್ನೆ (ಬಳಕೆಗೆ ತರುವುದರಿಂದ ತೊಂದರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವೊಬ್ಬರೇ ಒಪ್ಪಿಕೊಂಡು ಮಾಡಿದರೆ ಏನು ಪ್ರಯೋಜನ? ಅಖಿಲ ಭಾರತ ಪ್ರಶ್ನೆ ಅದು. The matter is under consideration.

ಶ್ರೀ ಡಿ. ಎಂ ಸಿದ್ದಯ್ಯನವರು.—ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಬೋಧನೆ ಮಾಡಲು ಬೇಕಾದ ಪುಸ್ತಕಗಳು ತಯಾರಾಗಿವೆಯೆಂಬುದು ಗೊತ್ತಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇರಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ವಿದ್ಯಾರ್ಥಿಗಳು ಅವುಗಳನ್ನು ಓದಿದರೆ ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾರೆ, ಏನೂ ತೊಂದರೆಪಡುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿಲ್ಲ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಸಂಸ್ಥಾನದಲ್ಲಿ ತೆಲುಗು, ಉರ್ದು, ತಮಿಳು ಹಿಂದಿ ಮತ್ತು ಕನ್ನಡ ಪ್ರೈಮರಿ ಸ್ಕೂಲುಗಳಿವೆಯೆಂದು ಹೇಳಿದ್ದೀರಿ. ತೆಲುಗು ಪ್ರೈಮರಿ ಸ್ಕೂಲುಗಳು ಎಷ್ಟಿವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್. Answers have been supplied last time. These questions do not arise this time.

ಶ್ರೀ ಜಿ. ನಾರಾಯಣಗೌಡರು.—ತೆಲುಗು ಪ್ರೈಮರಿ ಸ್ಕೂಲುಗಳೇನಾದರೂ ಇವೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇವೆ.

ಶ್ರೀ ಜಿ. ನಾರಾಯಣಗೌಡರು.—ತೆಲುಗು ಮಾತನಾಡುವವರ ಜನಸಂಖ್ಯೆಗನುಗುಣವಾಗಿ ಸಾಕಾದಷ್ಟು ತೆಲುಗು ಪ್ರೈಮರಿ ಸ್ಕೂಲುಗಳನ್ನೇರ್ಪಡಿಸಿದ್ದೀರಾ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಹೈಸ್ಕೂಲುಗಳಲ್ಲಿ ಉರ್ದುವನ್ನು ಕಡ್ಡಾಯವಾದ ಭಾಷೆಯಾಗಿ ಮಾಡಿದೆಯೆಂದು ಕೇಳಿದ್ದೇವೆ. ಉರ್ದುವನ್ನು ಹೇಳಿಕೊಡುವುದಕ್ಕೆ ಸಾಕಾದಷ್ಟು ಮಂದಿ ಉಪಾಧ್ಯಾಯರಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಉರ್ದುವನ್ನು ಕಡ್ಡಾಯ ಭಾಷೆಯೆಂದು ಮಾಡಿಯೇ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಮಾಡಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಿಂದೀ ಶಿಕ್ಷಕರು ಸಾಕಾದಷ್ಟು ಮಂದಿ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಸಾಕಾದಷ್ಟು ಮಂದಿ ಉಪಾಧ್ಯಾಯರು

ಗಳಿಲ್ಲದೆ ಹಿಂದಿಯನ್ನು ಪ್ರಾರಂಭ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ?

Sri T. SIDDALINGAIYA.—That is a hypothetical question.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸಂಸ್ಥಾನದಲ್ಲಿ ಹೈಸ್ಕೂಲುಗಳಲ್ಲಿ ಐಚ್ಛಿಕವಾಗಿ ಹಿಂದಿಯನ್ನು ಎಲ್ಲಾದರೂ ಹೇಳಿಕೊಡುತ್ತಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅನೇಕ ಸ್ಕೂಲುಗಳಲ್ಲಿವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಹೈಸ್ಕೂಲುಗಳಲ್ಲಿ ಹಿಂದಿಯು ಕಡ್ಡಾಯವಾದ ಭಾಷೆಯಾಗಿ ಯಾವ ವರ್ಷದಿಂದ ಬಂದಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಚೀಚೆಗೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಎಲ್ಲಾ ಸ್ಕೂಲುಗಳಲ್ಲೂ ಹಿಂದಿ ಉಪಾಧ್ಯಾಯರುಗಳಿದ್ದಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ವರ್ಷ IV form ನಿಂದ ಪ್ರಾರಂಭ ಮಾಡಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಎಚ್. ಸಿದ್ದವೀರಪ್ಪನವರು.—ವಿದ್ಯಾಭ್ಯಾಸ ಕೇಂದ್ರದ ಆಡಳಿತಕ್ಕೆ ಸಂಬಂಧಪಟ್ಟ ವಿಷಯವಲ್ಲ, ಅಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲರಿಗೂ ಗೊತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಂದ ಮೇಲೆ ಇಂಟರ್-ಯೂನಿವರ್ಸಿಟಿ ಬೋರ್ಡಿನವರ ತೀರ್ಮಾನ ನಮ್ಮ ಪ್ರಾಂತ ಭಾಷೆಗೆ ವಿರುದ್ಧವಾಗಿದ್ದರೆ ನಾವದನ್ನು ಅನುಸರಿಸಿಯೇ ತೀರಬೇಕೆಂದು ಪ್ರತಿಬಂಧಕವಿಲ್ಲ ಅಲ್ಲವೆ?

Sri T. SIDDALINGAIYA—It is clear.

Sri M. GOVINDA REDDY (Chitaldrug District—General).—Are the Government aware that under the Constitution they cannot exclude any citizen from being admitted to any educational institution on the ground of language?

Sri T. SIDDALINGAIYA.—It is also clear in the Constitution.

Sri M. GOVINDA REDDY.—Will it not amount to exclusion if one language is made the medium of instruction?

Sri T. SIDDALINGAIYA.—There is difference. In the primary stage it is different: in the secondary stage it is quite different.

Sri M. GOVINDA REDDY.—In the University stage?

Sri T. SIDDALINGAIYA.—It is quite different.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಈಗಿರುವ ಸರ್ಕಾರಿ ಹುಕುಮಿನ ಪ್ರಕಾರ ಒಂದೊಂದು ತರಗತಿಗಳಲ್ಲಾದರೂ ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಇಂಗ್ಲೀಷೇ ಬೋಧಕ ಭಾಷೆಯಾಗಿರಬೇಕೆಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಈಚೆಗೆ ಇದನ್ನು ಸಡಲಿಸಿ ಹೆಚ್ಚು ಜನರು ಬಂದು ಇಂಗ್ಲೀಷು ಮಾಡಿಯಮ್ಮೇ ಬೇಕೆನ್ನುವುದಾದರೆ ಆದಕ್ಕನುಸಾರವಾಗಿ ಹೆಚ್ಚು ತರಗತಿಗಳನ್ನು ಏರ್ಪಡಿಸಬೇಕೆಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕಡ್ಡಾಯವಾಗಿ ಹಾಗೆ ಯಾವುದನ್ನೂ ಮಾಡಿಲ್ಲ. ಅವರು ಇಷ್ಟಪಟ್ಟರೆ ಮಾಡಿಕೊಳ್ಳಬಹುದು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹಾಲ ಸರ್ಕಾರಿ ಹುಕುಮಿನಿಂದ ಕನ್ನಡ ಬೋಧಕ ಭಾಷೆಯಾಗಿ ರೂಢಿಗೆ ಬರುವುದಕ್ಕೆ ತೊಂದರೆಯಾಗಿದೆಯೆಂದು ಹೇಳಿ ಇಂಗ್ಲೀಷನ್ನು ತೆಗೆದುಹಾಕಬೇಕೆಂದು ನಿಮಗೆ ಒತ್ತಾಯ ಬಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—The whole India is considering that question. ಅದಿನ್ನೂ ಆಲೋಚನೆಯಲ್ಲಿದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಎಷ್ಟು ದಿನ ಈ ಗೆಯೇ ಆಲೋಚನೆಯಲ್ಲಿರುತ್ತದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದೊಂದು ಪರ್ವಕಾಲವಾಗಿರುವುದರಿಂದ ಇದನ್ನು ಅಖಿಲ ಭಾರತ ಪ್ರಶ್ನೆಯಾಗಿ ಚರ್ಚೆ ಮಾಡುತ್ತಿದೆ. ನಾವೊಬ್ಬರೇ ತೀರ್ಮಾನಕ್ಕೆ ಬಂದು ಯಾವುದನ್ನೂ ಬಲಾತ್ಕಾರ ಮಾಡುವುದು ಸೂಕ್ತವಲ್ಲ. ಇನ್ನೂ ಸ್ವಲ್ಪ ಕಾಲ ಹಿಡಿಯುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ನೆರೆ ಸ್ವಾಂತ್ಯವಾದ ಮದ್ರಾಸಿನಲ್ಲಿ ಈಗಾಗಲ್ಲೇ ಒಂದು ಖಚಿತ ತೀರ್ಮಾನಕ್ಕೆ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರು ಖಚಿತವಾಗಿ ತೀರ್ಮಾನ ಮಾಡಿರುವ ವಿಚಾರವನ್ನು ಎಷ್ಟು ಕಮ್ಮಿ ಮಾತನಾಡಿದರೆ ಅಷ್ಟು ಮೇಲು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಮದ್ರಾಸಿನಲ್ಲಿ ತೀರ್ಮಾನ ಮಾಡಿರುವ ರೀತಿ ಉತ್ತಮವಾಗಿದೆ. ಆ ರೀತಿಯಾಗಿ ಇಲ್ಲಿಯೂ ಮಾಡಬೇಕೆಂದು ನಿಮಗೆ ಒತ್ತಾಯ ಬಂದಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಉತ್ತಮವಾಗಿದೆ, ಅಥವಾ ಇಲ್ಲ ಎಂಬುದು ಅಭಿಪ್ರಾಯದ ವಿಷಯ. ಒತ್ತಾಯ ಸರ್ಕಾರದವರ ಮೇರೆ ಯಾವುದೂ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಕೆಲವು ಜನರಿಗಾದರೂ ಇದು ಗೊತ್ತಾಗುವಂತೆ ಆದಷ್ಟು ಜಾಗ್ರತೆ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆಂಬ ಭರವಸೆಯನ್ನಾದರೂ ಕೊಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಂಡಿತವಾಗಿ ಭರವಸೆ ಕೊಡುತ್ತೇವೆ.

Mr. SPEAKER.—Question time over.

MOTION FOR ADJOURNMENT.

Re: Affixing Stamps on Petition to the Government for reply.

Janab SYED ABDUR RAHMAN (Chikmagalur *cum* Shimoga - Muslim).—What happened to my adjournment